ಬಂದಿದ್ದರು. ನಾನು ಹೋಗಿ ನೋಡಿದ ವಿದ್ಯಮಾನದ ರೀತಿಯಲ್ಲಿ, ಪತ್ರಿಕೆಯಲ್ಲಿ ಬಂದಿರತಕ್ಕ ವಿಚಾರದಲ್ಲಿ ಮತ್ತು ನಿನ್ನೆ ಸದನದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿರುವ ವಿಚಾರದಲ್ಲಿ ಪ್ರಸ್ತಾಪ ಮಾಡಬೇಕು. ಪೋಲೀಸರು ಯಾವ ತನಿಖೆಯನ್ನು ನಡೆಸುತ್ತಿದ್ದಾರೆ ಅದರಲ್ಲಿ ಸಾಕಷ್ಟು ವಿಚಾರಗಳು ಬಂದಿವೆ. ಆದ್ದರಿಂದ ಈ ಬಗ್ಗೆ ಎಲ್ಲಾ ಪ್ರಸ್ತಾಪ ಮಾಡಬೇಕು. ಈ ದಿನ ಕಾರ್ಯಕಲಾಪ ಮುಗಿಯುವುದರೊಳಗೆ ಯಾವುದಾದರೂ ವೇಳೆಯಲ್ಲಿ ಪ್ರಸ್ತಾಪಿಸಲು ಅವಕಾಶ ಮಾಡಿಕೊಡಬೇಕು. ಇದರಲ್ಲಿ ಪೋಲೀಸರ ನಿಷ್ಕ್ರಿಯತೆ ಕಂಡುಬಂದಿದೆ. ಸ್ಥಳೀಯ ಪೋಲೀಸಾ ಅಧಿಕಾರಿಗಳು 5 ಕೇಸ್ ರಿಜಿಸ್ಟರ್ ಮಾಡಲಿಲ್ಲ ಎಂದು ತಿಳಿದುಬಂದಿವೆ. ಆದ್ದರಿಂದ ಆ ವಿಚಾರವನ್ನು ಪುನಃ ಪ್ರಸ್ತಾಪ ಮಾಡಬೇಕು. ಪೋಲೀಸರ ನಡವಳಿಕೆ ಮತ್ತು ಮಾಡಿದಂಥ ತನಿಖಾ ವಿಧಾನದ ಬಗ್ಗೆ ನಾವು ಚರ್ಚೆ ಮಾಡಬೇಕು. ಈಗಲೂ ಈ ವಿಷಯ ನಿಗೂಢವಾಗಿ ಉಳಿದಿದೆ. ಹೆಚ್ಚು ನಿಗೂಢವಾದದ್ದು ಪೋಲೀಸರು ಮತ್ತು ಅರಣ್ಯ ಇಲಾಖೆಯವರ ನಡವಳಿಕೆಯಿಂದ. ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆಯಿಂದ ಮತ್ತಷ್ಟು ನಿಗೂಢವಾಗಿದೆ; ಸೂಕ್ಷ್ಮವಾಗಿದೆ. ವಿಚಾರಣೆಯಲ್ಲಿ ಸಂಪೂರ್ಣ ನಿಷ್ಕ್ರಿಯತೆ ಕಂಡುಬಂದಿದೆ. Direction for investigation is important. ಮುಖ್ಯಮಂತ್ರಿಗಳು ಡೈರೆಕ್ಷನ್ ಕೊಟ್ಟಿರುವುದರಿಂದ ಪರಿಸ್ಥಿತಿ ಸಂಪೂರ್ಣವಾಗಿ ಗೊಂದಲಮಯವಾಗಿದೆ. ಸ್ಪಷ್ಟವಾದ ಚಿತ್ರ ಹೊರಬರುವುದು ಅಸಾಧ್ಯವಾಗಿದೆ. ಆ ದೃಷ್ಟಿಯಿಂದ ಈ ಸದನದಲ್ಲಿ ಚರ್ಚೆಯಾಗಬೇಕು.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾನು ಮತ್ತು ವಿ. ಎಸ್. ಆಚಾರ್ಯ ಅವರು ಮೊನ್ನೆ ದಿವಸ ಅಲ್ಲಿಗೆ ಹೋಗಿದ್ದೆವು. ಮಾನ್ಯ ಮೊಯಿಲಿಯವರು ಹೇಳುವುದು ಸತ್ಯವಾದ ಸಂಗತಿಯಾಗಿದೆ. ಆದ್ದರಿಂದ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು.—ನೋಟೀಸ್ ಇಲ್ಲ ಸದಸ್ಯರ ಹಕ್ಕು ಬಾಧ್ಯತಾ ಚ್ಯುತಿ ಬಗ್ಗೆ.

ಪಾವಗಡ ವಿಷಯದ ಮೇಲೆ ಸಚಿವರುಗಳ ಹೇಳಿಕೆಯ ಬಗ್ಗೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರು ಹೇಳಿರತಕ್ಕ ವಿಚಾರದಲ್ಲಿ ಚರ್ಚೆಯಾಗುವುದು ಸೂಕ್ತ. ಅದಕ್ಕೆ ನಾನೂ ಬೆಂಬಲ ಕೊಡುತ್ತೇನೆ. ನಾನು ಪ್ರತ್ಯೇಕವಾದ ಒಂದು ಹಕ್ಕುಚ್ಯುತಿ ನಿರ್ಣಯವನ್ನು ಮಾನ್ಯ ಮುಖ್ಯಮಂತ್ರಿಗಳ ವಿರುದ್ಧ ಕಳುಹಿಸಿ ಕೊಟ್ಟಿದ್ದೇನೆ. ವಿಧಾನಪರಿಷತ್ತಿನಲ್ಲಿ ಪಾವಗಡದ ವಿಚಾರವಾಗಿ ಮೂರು ಜನ ಸಚಿವರು ಬೇರೆ ಬೇರೆ ಹೇಳಿಕೆಯನ್ನು ಕೊಟ್ಟಿದ್ದಾರೆ.

ಅಧ್ಯಕ್ಷರು.—ಅದು ಹಕ್ಕು ಚ್ಯುತಿ ಹೇಗಾಗುತ್ತದೆ ?

ಶ್ರೀ ಎಸ್. ಬಂಗಾರಪ್ಪ.—ಅದನ್ನು ನಾನು ಹೇಳಿದರೆ ಮಾತ್ರ ತಮಗೆ ಗೊತ್ತಾಗುತ್ತದೆ.

ಅಧ್ಯಕ್ಷರು.—ಇದೇ ಸದನದಲ್ಲಿ ಮತ್ತು ಸಂಸತ್ತಿನಲ್ಲಿ ನಡೆದಿರತಕ್ಕ ಪ್ರಾಕ್ಟೀಸ್ ಮತ್ತು ಪ್ರೊಸೀಜರ್ ಪ್ರಕಾರ ಹೇಳಿಕೆಗಳು incorrect statements, conflicting statements ಹಕ್ಕು ಚ್ಯುತಿಯಾಗುವುದಿಲ್ಲ ಎಂಬುದು ತಿರ್ಮಾನವಾದ ವಿಚಾರ.

ಶ್ರೀ ಎಸ್. ಬಂಗಾರಪ್ಪ.—ನಾನು ಸದನದ ಮುಂದೆ ವಿಚಾರ ಏನು ಎಂದು ಹೇಳುವುದಕ್ಕಿಂತ ಮೊದಲೇ ಈ ರೀತಿ ತೀರ್ಮಾನಕ್ಕೆ ಬರುವುದು ಸರಿಯಾದುದಲ್ಲ.

ಅಧ್ಯಕ್ಷರು.—ಬೇರೆ ರೂಪದಲ್ಲಿ ಚರ್ಚೆ ಮಾಡಬೇಕಾಗುತ್ತದೆ.

ಎಸ್. ಬಂಗಾರಪ್ಪ.—ನಾನು ಯಾವ ವಿಚಾರವನ್ನು ಸಭೆಯ ಮುಂದಿಡುತ್ತೇನೆ ಎಂಬುದನ್ನು ಹೇಳಿದ ಮೇಲೆ ಏನು ಎಂಬುದ ಗೊತ್ತಾಗುತ್ತದೆ.

ಅಧ್ಯಕ್ಷರು.—ನೋಟೀಸಿನಲ್ಲಿ ಗೊತ್ತಾಗುವುದಿಲ್ಲವೆ ?

ಶ್ರೀ ಎಸ್. ಬಂಗಾರಪ್ಪ.—ನೋಟೀಸಿನಲ್ಲಿ ಎಲ್ಲಾ ಬರೆಯುವುದಕ್ಕಾಗುವುದಿಲ್ಲ. ತಾವು ವಿಚಾರವನ್ನು ಗಮನಿಸಬೇಕು. ಈ ಸದನದಲ್ಲಿ ಪಾವಗಡ ಪ್ರಕರಣದ ಬಗ್ಗೆ ಚರ್ಚೆ ನಡೆದಾಗ ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆ ಕೊಟ್ಟರು. ಅಲ್ಲಿ ಒಟ್ಟು 8 ಶಿಶುಹತ್ಯೆ ನಡೆದಿದೆ.

ಶ್ರೀ ರಾಮಕೃಷ್ಣ ಹೆಗಡೆ.—7.

ಶ್ರೀ ಎಸ್. ಬಂಗಾರಪ್ಪ.—7 ನಡೆದಿದೆ. ನಾನು ಈ ಬಗ್ಗೆ ಹೇಳಬೇಕಾದುದನ್ನು ಹೇಳಿದ ಮೇಲೆ ತಾವು ತಮ್ಮ ರೂಲಿಂಗ್ ಕೊಡಿ.

ಅಧ್ಯಕ್ಷರು.—ತಮ್ಮ ನೋಟೀಸ್‌ನಲ್ಲಿ ಏನು ಹೇಳಿದ್ದೀರಿ ಎಂಬುದನ್ನು ತಮ್ಮ ಗಮನಕ್ಕೆ ತರುತ್ತೇನೆ. ಶಾಸನಸಭೆಯಲ್ಲಿ ಇತ್ತೀಚೆಗೆ ಮಾನ್ಯ ಮುಖ್ಯಮಂತ್ರಿಗಳು ಪಾವಗಡ ಪ್ರಕರಣದ ಬಗ್ಗೆ ಹೇಳಿಕೆ ಕೊಟ್ಟಾಗ ಮತ್ತು ನಿನ್ನೆ ವಿಧಾನಪರಿಷತ್ತಿನಲ್ಲಿ ಸರ್ಕಾರದ ಪರವಾಗಿ ಹೇಳಿಕೆ ನೀಡಿದಾಗ ಮೊದಲ 5 ಶಿಶುಗಳು ಸತ್ತ ವಿಷಯದಲ್ಲಿ ಸ್ಥಳೀಯ ಪೋಲೀಸರು ಕೇಸನ್ನು ದಾಖಲು ಮಾಡಿಕೊಂಡಿಲ್ಲ ಎಂಬ ವಿಷಯವನ್ನು ಈ ಸದನದಲ್ಲಿ ಮರೆಮಾಚಿ ಇಡೀ ಸದನವನ್ನು ತಪ್ಪುದಾರಿಗೆ ಎಳೆದು ಸದನದ ಹಕ್ಕನ್ನು ಮೊಟಕು ಮಾಡಿದ್ದಾರೆ ಎಂದು ಹೇಳಿದ್ದೀರಿ. ಅದಕ್ಕೆ ನಾನು ಏನು ಹೇಳುತ್ತೇನೆಂದರೆ

> "as already stated giving of a premature publicity to various matters connected with the business of the House is an act

of impropriety but not a breach of privilege or contempt of House. There are certain other actions which may be improper but they do not, technically speaking, constitute breach of privilege or contempt of the House."

ಆದುದರಿಂದ ನಾನು ಏನು ಹೇಳುತ್ತಿದ್ದೇನೆಂದರೆ, 190-191ನೇ ನಿಯಮದ ಕೆಳಗೆ ತಾವು ಏನು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೀರಿ, ಈ ವ್ಯಾಪ್ತಿಗೆ ಇದು ಬರುವುದಿಲ್ಲವೆನ್ನುವುದನ್ನು ನಾನು ಹೇಳುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ನನ್ನ ಅಭಿಪ್ರಾಯದಲ್ಲಿ ಇದು ಸ್ಪಷ್ಟವಾಗಿ ನಿಯಮ 190-191ರ ಚಾಪ್ಟರ್‌ನಲ್ಲಿ ಬರುತ್ತದೆಂದು ನನ್ನ ವಾದ. ನನ್ನ ವಾದವನ್ನು ಮಂಡನೆ ಮಾಡಿದ ಮೇಲೆ ತಾವು ಅಂತಿಮವಾಗಿ ಹೇಗೆ ನಿರ್ಣಯವನ್ನು ಕೊಡಬೇಕೋ ಆದನ್ನು ಕೊಡಿ. ತಾವು ಆಮೇಲೆ ಅದನ್ನು ಕೊಡಿ.

Mr. Speaker.—Prima facie looking the notice that you have given to me I have said that it does not come well within the preview of breach of privilege.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೇ. ಯಾವ ವಿಚಾರವನ್ನು ನಾವು ವಿಚಾರ ಮಾಡಬೇಕೆಂದಿದ್ದೇವೆ ಅದನ್ನು ಕೇಳಿ ತಾವು ರೂಲಿಂಗ್ ಕೊಟ್ಟಿದ್ದರೆ ಒಳ್ಳೆಯದಿತ್ತು.

ಅಧ್ಯಕ್ಷರು.—ಅಗತ್ಯವಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಅಗತ್ಯವಿದೆಯೆಂದು ನನ್ನ ಅಭಿಪ್ರಾಯ.

Mr. Speaker.—I have already given my ruling on that point.

ಶ್ರೀ ಎಸ್. ಬಂಗಾರಪ್ಪ.—ನಿಯಮ 190 ಹಾಗೂ 191ರಲ್ಲಿ ಎಲ್ಲಾ ವಿಚಾರವನ್ನು ಕೇಳಿ ಅನಂತರ ರೂಲಿಂಗ್ ಕೊಡಬೇಕಾಗುತ್ತದೆ. ಏನನ್ನೂ ಕೇಳದೇ ಮಾಡಿದರೆ ತಪ್ಪಾಗುತ್ತದೆಂದು.....

ಅಧ್ಯಕ್ಷರು.—ತಾವು ನಿಯಮವನ್ನು ಓದಿ.

ಒಬ್ಬ ಮಾನ್ಯ ಸದಸ್ಯರು.—ಒಂದು ಸಾರಿ ರೂಲಿಂಗನ್ನು ಕೊಟ್ಟ ಮೇಲೆ ಅದರ ಮೇಲೆ ಮಾತನಾಡುವುದಾದರೆ it amounts to showing disrespect to the Chair.

Sri S. Bangarappa.—Sir, the rule says, "A member may, with the consent of the Speaker, raise a question involving a breach of privilege "

Mr. Speaker.—Please note the words "with the consent of the Speaker." I have not given my consent.

ಶ್ರೀ ಎಸ್. ಬಂಗಾರಪ್ಪ.—ತಾವು ಕನ್ಸೆಂಟ್ ಕೊಡಬೇಕೆಂದು ವಿಷಯದ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದೇನೆ. ಒಂದು ವೇಳೆ ತಾವು ರೂಲಿಂಗ್ ಕೊಟ್ಟಿದ್ದರೆ

ಒಬ್ಬ ಮಾನ್ಯ ಸದಸ್ಯರು.—ಒಂದು ಸಾರಿ ರೂಲಿಂಗ್ ಕೊಟ್ಟಮೇಲೆ....

ಶ್ರೀ ಎಸ್. ಬಂಗಾರಪ್ಪ.—ನಾನು ವಿಷಯವನ್ನು ಹೇಳುತ್ತೇನೆ.

Mr. Speaker.—I shall try to bring home to the hon'ble member to the relevant point. On receipt of your notice—

ಶ್ರೀ ಎಸ್. ಬಂಗಾರಪ್ಪ.—ತಾವು ನಮ್ಮ ಹೇಳಿಕೆಯನ್ನು ಕೇಳದೇ ತಮ್ಮ ರೂಲಿಂಗ್ ಕೊಡುವುದು ಒಳ್ಳೆಯದಲ್ಲ. ಅಧ್ಯಕ್ಷರು ರೂಲಿಂಗ್ ಕೊಟ್ಟಮೇಲೆ ಅದನ್ನು ರಿವೈಜ್ ಮಾಡುವುದಕ್ಕೆ ಅಪೀಲ್ ಮಾಡಿಕೊಂಡಿರತಕ್ಕ ಪ್ರಕರಣಗಳೂ ಇವೆ. ಹಾಗೂ ರಿವೈಸ್ ಮಾಡಿರತಕ್ಕ ಪ್ರಕರಣಗಳೂ ಇವೆ. ಆದ್ದರಿಂದ ದಯಮಾಡಿ ವಿಚಾರ ಏನು ಎಂಬುದನ್ನು ತಿಳಿದು ರೂಲಿಂಗ್ ಕೊಡಬೇಕು.

ಅಧ್ಯಕ್ಷರು.—ತಾವು ನೋಟೀಸ್ ಕೊಟ್ಟಿದ್ದೀರಿ.

ಶ್ರೀ ಎಸ್. ಬಂಗಾರಪ್ಪ.—ಈ ಸದನದಲ್ಲಿ ನಡೆದಿರತಕ್ಕ ನಡವಳಿಕೆಗಳಿಗೂ ಆ ಸದನದಲ್ಲಿ ನಡೆದಿರತಕ್ಕ ನಡವಳಿಕೆಗಳಲ್ಲಿ ಈ ಸಂಬಂಧವಾಗಿ ಕೊಟ್ಟಿರತಕ್ಕ ಹೇಳಿಕೆಗಳನ್ನು ನೋಡಿದರೆ ವ್ಯತ್ಯಾಸ ಕಂಡು ಬರುತ್ತದೆ. ಈ ಬಗ್ಗೆ ಸರ್ಕಾರ ಮರೆಮಾಚಿದರೆ ಆ ಬಗ್ಗೆ ತಾವು ಏನು ತೀರ್ಪು ಕೊಡುತ್ತೀರೋ ಅದನ್ನು ಕೊಡಿ. ಆದರೆ ನಾವು ಇದನ್ನು ಹೇಳತಕ್ಕ ಸಂದರ್ಭದಲ್ಲಿ ನಮಗೆ ಇರತಕ್ಕ ಹಕ್ಕುಗಳು ಏನಿವೆ ಅವುಗಳು ಚಲಾವಣೆಯಾಗಬೇಕು. ಹಾಗೂ ಈ ಬಗ್ಗೆ ತಾವು ರಕ್ಷಣೆ ಕೊಡಬೇಕೆಂದು ನಮ್ಮ ಅಭಿಪ್ರಾಯ. ಅದಕ್ಕೋಸ್ಕರ ನಾನು ತಮ್ಮಲ್ಲಿ ಏನು ವಿನಂತಿ ಮಾಡಿಕೊಳ್ಳುತ್ತಿದ್ದೇನೆಂದರೆ, ಈ ಸದನದಲ್ಲಿ ನಡೆದಿರತಕ್ಕ ನಡವಳಿಕೆಗಳು, ಮುಖ್ಯಮಂತ್ರಿಗಳು ಕೊಟ್ಟಿರತಕ್ಕ ಹೇಳಿಕೆ ಮತ್ತು ನಿನ್ನೆ ಆ ಸದನದಲ್ಲಿ ಮಂತ್ರಿಮಂಡಲದ ಬೇರೆ ಸದಸ್ಯರು ಕೊಟ್ಟಿರತಕ್ಕ ಹೇಳಿಕೆ—ಇವುಗಳಲ್ಲಿ ಬಹಳ ವ್ಯತ್ಯಾಸ ಇದೆ. ಆದುದರಿಂದ ತಮ್ಮ ಗಮನಕ್ಕೆ ತರುತ್ತಿದ್ದೇನೆ, ಇವುಗಳಲ್ಲಿ ವ್ಯತ್ಯಾಸ ಇರುವುದರಿಂದ ಈ ಸದನದ ಹಕ್ಕುಬಾಧ್ಯತೆಗಳು ಮೊಟಕು ಆಗುವುದಿದ್ದರೆ, ಈ ಸದನದ ಹಕ್ಕನ್ನು ತಾವು ಕಾಪಾಡಬೇಕಾಗುತ್ತದೆ. ಇದರಲ್ಲಿ ಏನೊಂದು ವ್ಯತ್ಯಾಸ ಇದೆ

ಎಂಬುದನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಅಧ್ಯಕ್ಷರು.—ಇಲ್ಲ, ಈ ಬಗ್ಗೆ ಪ್ರಸ್ತಾಪಕ್ಕೆ ಅವಕಾಶ ಕೊಡುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ತಾವು ರೂಲಿಂಗನ್ನು ಕೊಟ್ಟಿದ್ದೀರಿ. It is all right.

ನಾನು ತಮಗೆ ಏನು ಅಪೀಲ್ ಮಾಡಿಕೊಳ್ಳುತ್ತೇನೆ ಎಂದರೆ, ನಾನು ಇನ್ನೂ ವಿಷಯದ ಬಗ್ಗೆ ಸಂಪೂರ್ಣವಾಗಿ ಪ್ರಸ್ತಾಪ ಮಾಡಿಲ್ಲ. ತಾವು ಇದಕ್ಕೆ ಅವಕಾಶ ಕೊಡದೇ ..

Mr. Speaker.--On receipt of the notice the matter is considered by the Speaker. He may either give or with-held his consent to the raising of question itself. I have with-held my consent to the raising of issue itself.

ಶ್ರೀ ಎಸ್. ಬಂಗಾರಪ್ಪ.—ಅದಕ್ಕೋಸ್ಕರ ನಾನು ಹೇಳುತ್ತಿದ್ದೇನೆ, ತಾವು ಏನು ರೂಲಿಂಗ್ ಕೊಟ್ಟಿದ್ದೀರಿ ಅದನ್ನು ರಿವೈಸ್ ಮಾಡಬೇಕೆಂದು ನಾನು ಅಪೀಲ್ ಮಾಡಿಕೊಳ್ಳುತ್ತಿದ್ದೇನೆ. ಹಾಗು ನಾನು ಏಕೆ ಮಾಡುತ್ತಿದ್ದೇನೆಂಬುದನ್ನೂ ಹೇಳುತ್ತಿದ್ದೇನೆ. ಈ ಸದನದಲ್ಲಿ ಮುಖ್ಯಮಂತ್ರಿಗಳು ಹೇಳಿಕೆ ಕೊಟ್ಟಾಗ ...

Mr. Speaker.--I have already given my ruling and I don't want to proceed with further discussion.

ಶ್ರೀ ಎಸ್. ಬಂಗಾರಪ್ಪ.--ಅದನ್ನು ರಿವೈಸ್ ಮಾಡಬೇಕೆಂದು ನಾನು ಹೇಳುತ್ತಿದ್ದೇನೆ. ನನ್ನ ವಿಚಾರವನ್ನು ಕೇಳಿ,

*

Mr. Speaker.--Nothing will go on record.

ಶ್ರೀ ಎಸ್. ಬಂಗಾರಪ್ಪ.—ತಾವು ರಿವೈಸ್ ಮಾಡಬೇಕೆಂದು ನಾನು ಅಪೀಲ್ ಮಾಡಿಕೊಳ್ಳುತ್ತಿದ್ದೇನೆ. ದಯಮಾಡಿ ವಿಚಾರವನ್ನು ಇವತ್ತು ಈ ಸದನಕ್ಕೆ ...

Mr. Speaker.--Nothing will go on record. ಬಂಗಾರಪ್ಪನವರೇ, ಈ ವಿಷಯದ ಬಗ್ಗೆ ನನ್ನ ಯಾವುದೇ ರೀತಿಯ ಅಭಿಪ್ರಾಯ ಇಲ್ಲ. ವಿಷಯದ ಗಂಭೀರತೆಯ ಬಗ್ಗೆ ತಮಗೆ ಏನು ಕಳಕಳಿ ಇದೆ ಅದೇ ರೀತಿ ಶಾಸನಸಭೆಯ ವ್ಯಾಪ್ತಿಯ ಒಳಗೆ ಕೆಲಸ ಮಾಡುವ ಸಂದರ್ಭದಲ್ಲಿ 191 ಹಾಗೂ 191ನೇ ನಿಯಮಾವಳಿಯಲ್ಲಿ ಹಾಕಿಕೊಂಡಿರತಕ್ಕ ವ್ಯಪ್ತಿಯಲ್ಲಿ ಇದು ಬರುವುದಿಲ್ಲವೆಂದು ನನ್ನ ತೀರ್ಪನ್ನು ಕೊಟ್ಟಿದ್ದೇನೆ. ಆದ್ದರಿಂದ ಈ ಬಗ್ಗೆ ಚರ್ಚೆ ಮಾಡಬಾರದೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೇ,

ಶ್ರೀ ಎಂ. ವೀರಪ್ಪ ಮೊಯ್ಲಿ.—ವಿಷಯ ಪ್ರಿಮಾಫೇಸ್ ಇದೆಯೋ ಇಲ್ಲವೋ ಎನ್ನುವ ಬಗ್ಗೆ ಪ್ರಶ್ನೆ ಮಾಡುತ್ತಾ ಇಲ್ಲ. ತಮ್ಮ ಹಕ್ಕು ತಮಗೆ ಬಿಟ್ಟದ್ದು. ಈಗ ಮಾನ್ಯ ಸದಸ್ಯರು ವಿಷಯವನ್ನು ಎತ್ತಿದ್ದಾರೆ.

(ಗೊಂದಲ)

ಮಾನ್ಯ ಸದಸ್ಯರು 191ನೇ ನಿಯಮದ ಕೆಳಗೆ ವಿಷಯವನ್ನು ಎತ್ತುತ್ತಿದ್ದಾರೆ.

ಅಧ್ಯಕ್ಷರು.—ದಯಮಾಡಿ ನಿಯಮ 193ನ್ನು ಓದಿ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಆಮೇಲೆ ಅದನ್ನು ಓದೋಣ.

ನಾವು ಈಗ ಸೆಕೆಂಡ್ ಸ್ಟೇಜ್‌ಗೆ ಹೋಗುವುದು ಬೇಡ. ನಿಯಮ 191 ಹಾಗೂ 192ರ ಪ್ರಕಾರ ಮಾನ್ಯ ಸದಸ್ಯರು ಅವರ ವಿಷಯಗಳ ಚರ್ಚೆಗೆ ಅವಕಾಶವನ್ನು ಕೇಳುತ್ತಿದ್ದಾರೆ. ತಾವು ನಿಯಮ 193ನ್ನು ಓದಬೇಕೆಂದು ಹೇಳುತ್ತಿದ್ದೀರಿ. ಈ ವಿಷಯದ ಬಗ್ಗೆ ತಾವು ಆ ಹೆಜ್ಜೆಯನ್ನು ಇಡುವುದಾದರೆ ಬಹುಶ: ಈ ಸದನದಲ್ಲಿ ಯಾವುದೇ ವಿಷಯವನ್ನು ಎತ್ತುವುದಕ್ಕೆ ಅವಕಾಶವಾಗುವುದಿಲ್ಲ. ಮಾನ್ಯ ಸದಸ್ಯರು ವಿಷಯವನ್ನು ಮಂಡನೆ ಮಾಡಿದ ಮೇಲೆ ಅದಕ್ಕೆ ಒಪ್ಪಿಗೆ ಕೊಡಲು ಅವಕಾಶ ಇದೆಯೆ ಇಲ್ಲವೇ ಎಂಬುದನ್ನು ಹೇಳಬೇಕಾಗುತ್ತದೆ.

Mr. Speaker.--Prima facie looking to the notice.

Sri M. Veerappa Moily.--**Prima facie** comes later.

Mr. Speaker.--The subject matter of the notice does not come well within the purview of the motion.

Sri S. Bangarappa.--Sir, what I would like to submit is, . .

Mr. Speaker.--No discussion on that.

ಶ್ರೀ ಕೆ. ಜಿ. ಮಹೇಶ್ವರಪ್ಪ.--191ನೇ ರೂಲ್ ಸ್ಪಷ್ಟ ಇದೆ. ಪ್ರಿವಿಲೇಜ್ ಕ್ವಶ್ಚನ್ ರೈಸ್ ಮಾಡುವುದಕ್ಕೆ ಕನ್ಸೆಂಟ್ ಬೇಕು.

---

* As ordered by the Chair, the matter was not recorded.

Mr. Speaker.--I have not given consent.

ಶ್ರೀ ಎಸ್. ಬಂಗಾರಪ್ಪ.--ತಾವು ನಿಯಮ 193ನ್ನು ಈಗಾತಾನೇ ಉಲ್ಲೆಖ ಮಾಡಿದ್ದೀರಿ. ಅದರಲ್ಲಿ The Speaker, if he gives consent under rule and holds that the matter proposed to be discussed is in order etc. ಎಂದು ಹೇಳಿದೆ.

ಇವತ್ತು ನಾವು ಕೇಳಿರತಕ್ಕದ್ದು ಆರ್ಡರ್ ಇದೆಯೋ ಇಲ್ಲವೋ ಎನ್ನುವುದು

Sri M. Veerappa Moily.—The Speaker has given his consent to raise the issue.

Mr. Speaker.--No.

Sri S. Bangarappa.—The matter is in order.

ಆದುದರಿಂದ ಅಧ್ಯಕ್ಷರೇ, ಇವತ್ತು ನಾವು ಕೊಟ್ಟಿರತಕ್ಕದು ಆರ್ಡರ್‌ನಲ್ಲಿ ಇದೆಯೋ ಇಲ್ಲವೋ ಎಂಬುದನ್ನು ನೋಡಿ.

ಅಧ್ಯಕ್ಷರು.--ಇಲ್ಲ ಎಂದು ಹೇಳಿದ್ದೇನೆ. ತಾವು ಏನು ಕೊಟ್ಟಿದ್ದೀರಿ ಅದು ಇದರ ವ್ಯಾಪ್ತಿಯಲ್ಲಿ ಬರುವುದಿಲ್ಲವೆಂದು ನಾನು ಹೇಳಿದ್ದೇನೆ.

12-30 p.m.

ಶ್ರೀ ಎಸ್. ಬಂಗಾರಪ್ಪ.--ಮಾನ್ಯ ಅಧ್ಯಕ್ಷರೇ ನಾನು ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಸದನದಲ್ಲಿ ಅನೇಕ ಸಂಪ್ರದಾಯಗಳು ನಡೆದಿವೆ. ರಿವೈಸ್ ಮಾಡುವುದಕ್ಕೆ ಸಾಧ್ಯತೆ ಇದೆ ಎನ್ನುವುದು ನನ್ನ ಅಭಿಪ್ರಾಯ. ಸದನದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಏನು ಹೇಳಿಕೆ ಕೊಟ್ಟಿದ್ದಾರೆ; 5 ಶಿಶು ಹತ್ಯೆ ನಡೆದಾಗಲೂ ಕೇಸುಗಳನ್ನು ರಿಜಿಸ್ಟರ್ ಆಗಿಲ್ಲ ಎನ್ನುವುದನ್ನು ಮಾನ್ಯ ಮುಖ್ಯಮಂತ್ರಿಗಳು ಮುಚ್ಚಿಟ್ಟಿದ್ದಾರೆ. ಅಲ್ಲಿ ನಡೆದಿರತಕ್ಕ ಹತ್ಯೆಗಳ ಬಗ್ಗೆ ಸತ್ಯಾಸತ್ಯತೆಯನ್ನು ಕಂಡುಹಿಡಿಯುವುದಕ್ಕೆ ಕಾನೂನು ಪ್ರಕಾರ ತನಿಖೆ ಕೂಡ ಪ್ರಾರಂಭವಾಗಿಲ್ಲ. ಮಾನ್ಯ ಮುಖ್ಯಮಂತ್ರಿಯವರು ಸದನವನ್ನು ತಪ್ಪುದಾರಿಗೆ ಎಳೆಯತಕ್ಕ ಪ್ರಯತ್ನ ಮಾಡಿರುವುದರಿಂದ ಈ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಸದನದಲ್ಲಿ ಅವಕಾಶ ಕೊಡಬೇಕು; ಇದರಲ್ಲಿ ಸದನದ ಹಕ್ಕು ಕೂಡ ಇದೆ.

ಮಾನ್ಯ ಸದಸ್ಯರು.--ಸ್ವಾಮಿ, ಸದನದಲ್ಲಿ ತಮ್ಮ ಅನುಮತಿ ಇಲ್ಲದೆ ಮಾತನಾಡುವುದಕ್ಕೆ ಅವಕಾಶ ಇದೆಯೇ ಹೇಗೆ ದಯವಿಟ್ಟು ತಿಳಿಸಬೇಕು.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.--ತಾವು ದಯವಿಟ್ಟು ರಿವೈಸ್ ಮಾಡಬೇಕು.

ಅಧ್ಯಕ್ಷರು.—ಬೇರೆ ರೂಪದಲ್ಲಿ ಕಳುಹಿಸಿಕೊಡಿ.

(ಗೊಂದಲ)

**

ಅಧ್ಯಕ್ಷರು.—ರೆಕಾರ್ಡ್ ಮಾಡಬೇಡಿ.

ಶ್ರೀ ಎಸ್. ಬಂಗಾರಪ್ಪ.—ಈ ರೀತಿ ಹೇಳುವುದರಿಂದ ಯಾರಿಗೂ ಉಪಯೋಗವಾಗುವುದಿಲ್ಲ.

ಅಧ್ಯಕ್ಷರು.—ಈ ರೀತಿ ಮಾತನಾಡುವುದರಿಂದ ಯಾರಿಗೂ ಉಪಯೋಗವಾಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.--ಮಾನ್ಯ ಮುಖ್ಯಮಂತ್ರಿಗಳು ಸದನವನ್ನು ತಪ್ಪುದಾರಿಗೆ ಎಳೆದಿರುವಂಥ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ತಾವು ಅವಕಾಶ ಕೊಡಬೇಕು.

ಅಧ್ಯಕ್ಷರು.—ಅದನ್ನೇ ಬೇರೆ ರೂಪದಲ್ಲಿ ತನ್ನಿ.

ಶ್ರೀ ಎಸ್. ಬಂಗಾರಪ್ಪ.--ಸದನದ ಹಕ್ಕನ್ನು ಮೊಟಕು ಮಾಡುವುದಕ್ಕೆ ನಾವು ತಯಾರಿಲ್ಲ.

ಶ್ರೀ ಧರ್ಮಸಿಂಗ್.—ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತೀರಿ; ನಮಗೆ ಕೊಡುತ್ತಿಲ್ಲ. ಇದು ನಮಗೆ ಅರ್ಥವಾಗುತ್ತಿಲ್ಲ.

ಅಧ್ಯಕ್ಷರು.—ತಾವು ಕೂತುಕೊಂಡರೆ ಅರ್ಥವಾಗುತ್ತದೆ.

(ಗೊಂದಲ)

ಶ್ರೀ ಪಿ. ರಾಂದೇವ್.—ಸ್ವಾಮಿ, ನನ್ನ ಕ್ರಿಯಾಲೋಪ ಏನೆಂದರೆ, ನಿಯಮ 302ರ ಪ್ರಕಾರ ತಾವು ತೀರ್ಪು ಕೊಟ್ಟಮೇಲೆ ಮುಂದಿನ ವಿಚಾರಕ್ಕೆ ಅವಕಾಶಕೊಟ್ಟಿದ್ದೀರಿ. ಮತ್ತೆ ಈ ಸಭೆಯ ಕಾರ್ಯ ಕಲಾಪಕ್ಕೆ ತಡೆಹಾಕತಕ್ಕಾಂಥದ್ದು ಸರಿಯೆ ?

ಶ್ರೀ ಧರ್ಮಸಿಂಗ್.—ಇದು ಪಾಯಿಂಟ್ ಆಫ್ ಆರ್ಡರ್ ಅಲ್ಲ.

ಶ್ರೀ ಜಿ.ಡಿ. ಸೋಮಪ್ಪ.—ರೂಲಿಂಗ್ ರಿವೈಸ್ ಮಾಡಿ ಎಂದು ಕೇಳುತ್ತಿದ್ದೇವೆ.

ಶ್ರೀ ಎಂ. ವೀರಪ್ಪಮೊಯ್ಲಿ.--ಸನ್ಮಾನ್ಯ ಅಧ್ಯಕ್ಷರೇ, ತಾವು ಏನೊಂದು ಅಪ್ಪಣೆ ಕೊಟ್ಟಿದ್ದೀರಿ; ಅದಕ್ಕೆ ವಿರೋಧವಾಗಿ ಮಾತನಾಡುವುದಿಲ್ಲ. ಮಾನ್ಯ ಸದಸ್ಯರಾದ ಬಂಗಾರಪ್ಪನವರು ಪ್ರಿವಿಲೇಜ್ ಮೋಷನ್ ಏನು ಕೊಟ್ಟಿದ್ದಾರೆ, ಅದಕ್ಕೆ ತಮ್ಮ ಒಪ್ಪಿಗೆ ಕೇಳುತ್ತಿದ್ದಾರೆ. ಅದಕ್ಕೆ ತಾವು ಕೊಡುವುದಿಲ್ಲ

** ಅಧ್ಯಕ್ಷರ ಆಜ್ಞೆ ಮೇರೆಗೆ ವರದಿಮಾಡಿಲ್ಲ.

ವೆಂದು ಹೇಳಿದ್ದೀರಿ. ತಾವು ಯಾವ ವಿಚಾರ ಹೇಳಿದ್ದೀರೋ ಅದನ್ನು ಬದಲಾವಣೆ ಮಾಡುವಂಥ ಹಕ್ಕು ತಮ್ಮ ಕೈಲಿದೆ. ನಿಯಮ 334ರ ಕೆಳಗೆ ಪಾವಗಡದ ವಿಷಯವನ್ನು ಪ್ರಸ್ತಾಪ ಮಾಡಿದ ಮೇಲೆ ಅದರ ಬಗ್ಗೆ ದ್ವಂದವಿಚಾರಗಳು ಬಂದು; ಹೊಸ ವಿಚಾರಗಳು ಬೆಳಕಿಗೆ ಬಂದಮೇಲೆ ಪ್ರಿವಿಲೇಜ್ ರೂಪದಲ್ಲಿ ತೆಗೆದುಕೊಳ್ಳಬೇಕೆಂದು ಮಾನ್ಯ ಸದಸ್ಯರು ಕೊಟ್ಟಿದ್ದಾರೆ. ನನ್ನ ಸಲಹೆ ಏನೆಂದರೆ; ಪ್ರಿವಿಲೇಜನ್ನು ಊರ್ಜಿತದಲ್ಲಿ ಇಡಿ; ಪಾವಗಡದ ವಿಚಾರದಲ್ಲಿ ಚರ್ಚೆ ಮಾಡುವಂಥ ಸಂದರ್ಭದಲ್ಲಿ ಪ್ರೇಮಾಫೇಸಿ ಪ್ರಿವಿಲೇಜ್ ವಿಷಯವನ್ನು ಎತ್ತುವುದಕ್ಕೆ ಅವಕಾಶ ಕೊಡಬಹುದು; ತಾವು, ಕೊಟ್ಟಕೂಡಲೇ ಒಪ್ಪಿಗೆ ಕೊಡುವುದಿಲ್ಲ ಅಂದರೆ ಅಷ್ಟು ದೊಡ್ಡ ಮಾತನ್ನು ಹೇಳಿದರೆ, ನಾವು ಪ್ರಿವಿಲೇಜ್ ತರುವುದಕ್ಕೆ ಕಷ್ಟವಾಗುತ್ತದೆ. ಇದರ ಬಗ್ಗೆ ತಾವು ವಿಚಾರ ಮಾಡಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು.--ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಯಾವ ಮಾರ್ಗಗಳಿಂದ ಬಂದರೂ ಕಾನೂನಿನ ವ್ಯಾಪ್ತಿಯೊಳಗೆ ಪರಿಶೀಲನೆ ಮಾಡುವುದಕ್ಕೆ ತಯಾರಾಗಿದ್ದೇನೆಂದು ಹೇಳಿದ್ದೇನೆ. ಆದರೆ, ಈ ವಿಷಯ ಪ್ರಿವಿಲೇಜಿನಲ್ಲಿ ಬರುವುದಿಲ್ಲವೆಂದು ಹೇಳಿದ್ದೇನೆ. ಬೇರೆ ರೂಪದಲ್ಲಿ ನೋಟೀಸ್ ಕೊಟ್ಟರೆ ಚರ್ಚೆಗೆ ಅವಕಾಶ ಕೊಡುತ್ತೇನೆ.

ಶ್ರೀ ಜೆ.ಹೆಚ್. ಪಟೀಲ್.—ತಾವು ನಿರ್ಣಯ ಕೊಟ್ಟಮೇಲೆ ಮತ್ತೆ ಪ್ರಸ್ತಾಪ ಮಾಡಲಿಕ್ಕೆ ಕಾನೂನಿನ ರಹ ಇದೆಯೆ ?

Sri K.G. Maheswarappa.--Rules are very clear. So far as the raising of Privilege Motion is concerned, the scope is limited. If the consent is given by the Speaker, Rule 194 comes into operation. And the member can raise from the seat and make a short speech.

(ಗೊಂದಲ)

First under rule 191 itself, there is a ruling and the Speker has refused consent and next item is already taken.

ಶ್ರೀ ಮಹದೇವ್.--ಅಧ್ಯಕ್ಷರು ಹೇಳುತ್ತಿದ್ದಾರೆ, ಅವರಿಗೆ ಬೆಲೆ ಕೊಡಿ.

Sri K. G. Maheswarappa.--There are two aspects. Even to open your mouth, the Chairman has to give his consent. After giving his consent, the scope is very limited. You can only make a short speech.

ಶ್ರೀ ಯಡಿಯೂರಪ್ಪ.—ತಾವು ರೂಲಿಂಗ್ ಕೊಟ್ಟಮೇಲೆ ಮತ್ತೆ ಅದೇ ವಿಷಯವನ್ನು ಪ್ರಸ್ತಾವ ಮಾಡುವುದಕ್ಕೆ ಅವಕಾಶ ಇದೆಯೇ ? ಇದರ ಬಗ್ಗೆ ಸದನದ ಸಮಯವನ್ನು ಕಳೆಯುವುದು ಬೇಡ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸದಸ್ಯರು ದಯಮಾಡಿ ತಿಳಿದುಕೊಳ್ಳಬೇಕು. ನಾನು ಈಗ ಬೇರೆ ಉತ್ತರ ಕೊಡುತ್ತಿದ್ದೆ. ಅದನ್ನು ನಾನು ಈಗ ಕೊಡಲಿಕ್ಕೆ ಇಷ್ಟಪಡುವುದಿಲ್ಲ. ಈ ಸದನದಲ್ಲಿ ಒಂದು ಸಾರಿ ಎತ್ತಿದಾಗ ಸ್ಪಷ್ಟವಾಗಿ ಒಂದು ಸಾರಿ ಒಂದು ರೂಲಿಂಗನ್ನು ಅಧ್ಯಕ್ಷರು ಕೊಟ್ಟಮೇಲೆ ಅದನ್ನು ಒಪ್ಪಿಸಿಕೊಳ್ಳಬೇಕು. ಆ ಮಾತು ಒಪ್ಪುತ್ತೇನೆ. ಕೆಲವೊಮ್ಮೆ ಅಂಥ ಪ್ರಕರಣಗಳು ಅಂಥ ಸುಸಂದರ್ಭ ಕಂಡುಬಂದಾಗ ಮಾನ್ಯ ಅಧ್ಯಕ್ಷರ ಮನವೊಲಿಸಿ ಅವರ ರೂಲಿಂಗ್ ರಿವೈಸ್ ಮಾಡಿರತಕ್ಕ ...

(ಗೊಂದಲ)

ಶ್ರೀ ಜೆ. ಹೆಚ್. ಪಾಟೀಲ್.—ಅಧ್ಯಕ್ಷರೆ, ಈ ಹಂತದಲ್ಲಿ ಒಂದು ಮಾತನ್ನು ಹೇಳುತ್ತೇನೆ. ಮಾನ್ಯ ಸದಸ್ಯರು 335ನ್ನು ಓದಲಿ.

ಶ್ರೀ ಎಸ್. ಬಂಗಾರಪ್ಪ.--335 ನನಗೆ ಗೊತ್ತಿದೆ. 312, 334, 335 ಎಲ್ಲಾ ಗೊತ್ತಿದೆ.

ಅಧ್ಯಕ್ಷರು.—ಗೊತ್ತಿದೆ ಅದರಂತೆ ನಡೆದುಕೊಳ್ಳಿ.

(ಗೊಂದಲ)

ಅಧ್ಯಕ್ಷರು.—ಬೇರೆ ರೂಪದಲ್ಲಿ ಕಳುಹಿಸಿ.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೆ, ತಾವು ಕರೆದ ಮೇಲೆ ಪೂರ್ತಿ ಹೇಳಲಿಕ್ಕೆ ಅವಕಾಶ ಮಾಡಿಕೊಡಬೇಕು.

(ಗೊಂದಲ)

Mr. Speaker.--No, no. I shall not allow. I have already given the ruling. I have already withheld my consent to this. I do not allow anything.

ಶ್ರೀ ಎಸ್. ಬಂಗಾರಪ್ಪ.—ನನಗೆ ಗೊತ್ತಿದೆ. ಆ ಮಾತನ್ನು ರೆಪೀಟಿಡ್ ಎಂದು ಹೇಳಿದ್ದೀರಿ.

(ಗೊಂದಲ)

ಶ್ರೀ ಧರ್ಮಸಿಂಗ್.—ಹಿಂದೆ ರೂಲಿಂಗ್ ಕೊಟ್ಟು ರಿವೈಸ್ ಮಾಡಿದ್ದಾರೆ. ನಮಗೆ ಗೊತ್ತಿದೆ. ಹಿಂದೆ ಅನೇಕ ನಿದರ್ಶನಗಳು ಇವೆ.

ಶ್ರೀ ಹೆಚ್. ಗಂಗಾಧರನ್.—ಅಧ್ಯಕ್ಷರೆ, ಒಂದು ಸಾರಿ ರೂಲಿಂಗ್ ಕೊಟ್ಟಮೇಲೆ ಮತ್ತೆ ಪುನರ್ ವಿಮರ್ಶೆ ಮಾಡಲಿಕ್ಕೆ ಅಧಿಕಾರ ಇದೆ ಎಂದು ಹೇಳುತ್ತಿದ್ದಾರೆ. ಮತ್ತೆ ರೂಲ್ಸ್ ಪ್ರಕಾರ ಅಧಿಕಾರ ಇಲ್ಲ ಎಂದು ರೂಲಿಂಗ್ ಕೊಡಬೇಕು.

ಶ್ರೀ ಜೆ.ಹೆಚ್. ಪಟೇಲ್.—ಅಧ್ಯಕ್ಷರೆ, ಇನ್ನೊಂದು ಅಂಶವನ್ನು ತಮ್ಮ ಗಮನಕ್ಕೆ ತರುತ್ತೇನೆ....

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ಈ ಕಡೆ ತಾವು ಕೇಳಲಿಕ್ಕೆ ತಯಾರಿಲ್ಲ ಎನ್ನತಕ್ಕ ಭಾವನೆ ನನಗೆ ಬರುತ್ತದೆ. ಅದು ಸರಿಯಲ್ಲ.

(ಗೊಂದಲ)

ಅಧ್ಯಕ್ಷರು.—ಭಾವನೆಗಳನ್ನು ವ್ಯಕ್ತ ಮಾಡಬೇಕು. ಆದರೆ ಕೆಲವು ಸಾರಿ ಇಲ್ಲಿ ಕುಳಿತು ಕೆಲಸ ಮಾಡುವಾಗ ನನಗೂ ನನ್ನದೇ ಆದ ಅಭಿಪ್ರಾಯಗಳು ಇವೆ. ಆದರೆ ಈ ಅಭಿಪ್ರಾಯಗಳನ್ನು ವ್ಯಕ್ತ ಮಾಡಬಾರದು ಎಂದು ಹೇಳಿ ಹತೋಟಿಯಲ್ಲಿ ಏತಕ್ಕೆ ಹಿಡಿಯುತ್ತೇವೆ. ಅಂದರೆ ನಿಮ್ಮ ಆ ಭಾವನೆಯಿಂದ ಸದನಕ್ಕೆ ಸಹಾಯವಾಗಲಿ ಎನ್ನುವ ಕಾರಣದಿಂದ. ಆದನ್ನು ಧ್ವನಿ ಏರಿಸಿ, ಈ ಸದನದ ಕೆಲಸ ಮಾಡುವುದು ಕಷ್ಟವಾಗುತ್ತದೆ ಎನ್ನುವಂಥ ಸ್ಥಿತಿ ಬಂದರೆ ಅದನ್ನು ಹೇಗೆ ನಡೆಸಬೇಕೆಂದು ತೀರ್ಮಾನ ಮಾಡಬೇಕಾಗುತ್ತದೆ. ನಾನು ಒಂದು ಸಾರಿ ತೀರ್ಮಾನ ಕೊಟ್ಟಿದ್ದೇನೆ ಮತ್ತೆ ಪುನಃ ಪ್ರಸ್ತಾಪ ಮಾಡಲಿಕ್ಕೆ ಅವಕಾಶ ಕೊಡುವುದಿಲ್ಲ. ಮಾನ್ಯ ಮಂತ್ರಿಗಳು ರಾಯಚೂರು ವಿಚಾರದಲ್ಲಿ ಹೇಳಿಕೆ ಕೊಡಬೇಕು.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೆ, ಧ್ವನಿ ಏರಿಸಿರತಕ್ಕವನು ನಾನು ಒಬ್ಬನೇ ಅಲ್ಲ, ಎಲ್ಲಾ ಕಡೆ ಧ್ವನಿ ಏರಿಸಿರತಕ್ಕದ್ದು ಇದೆ.

(INTERRUPTIONS)

Mr. Speaker.—Please sit down. I shall not allow. I have already heard. I do not want to hear on this subject, please. You cannot force the Chair.

(INTERRUPTIONS)

**

Mr. Speaker.—Nothing will go on record. ತಾವು ಕಳುಹಿಸಿರತಕ್ಕ ಪ್ರಿವಿಲೇಜ್ ವಿಚಾರದಲ್ಲಿ ನಾನು ಮೊದಲೇ ಹೇಳಿದ್ದೇನೆ. ಪ್ರೆಮಾಫೆಸಿ ಅದು ಪ್ರಿವಿಲೇಜ್ 190 ಮತ್ತು 191ರ ವ್ಯಾಪ್ತಿಯಲ್ಲಿ ಬರದೇ ಇರುವ ಕಾರಣ ನನ್ನ ಕನ್‌ಸೆಂಟ್ ವಿತ್‌ಹೋಲ್ಡ್ ಮಾಡಿದ್ದೇನೆ. ಅದರ ಮೇಲೆ ವ್ಯಾಖ್ಯಾನ ಮಾಡಲಿಕ್ಕೆ ಏನು ಅವಕಾಶ ಇದೆ ಹೇಳಿ. ಯಾವುದರಲ್ಲಿ ಬರುತ್ತದೆ ಕೋಟ್ ಮಾಡಿ . . . .

(ಗೊಂದಲ)

Mr. Speaker.—I am on my legs. I have closed this matter. I have explained the position. ನಾನು ಅದಕ್ಕೆ ಹೇಳಿದೆ. ಧ್ವನಿ ಎತ್ತರಿಸಿ ಮಾತನಾಡಿದರೆ....

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ತಾವು ಹೇಳತಕ್ಕದ್ದು ನೋಡಿದರೆ ಒಬ್ಬನಿಗೋಸ್ಕರ ಹೇಳಿದಂತಾಗುತ್ತದೆ. That is not correct.

Mr. Speaker.—I have requested the hon. Member. I am on my legs. I have given my considered ruling on this question. I have requested the member to give notice in some other form so that I can consider. Despite the fact if you want to insist on it, I do not think it is right. I had called the Hon. Minister to make a statement.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ನಾನು ಒಂದು ನಿಮಿಷ ಮಾತ್ರ ನನ್ನ ಪೊಸಿಷನ್ ಎಕ್ಸ್‌ಪ್ಲೈನ್ ಮಾಡುತ್ತೇನೆ. ಫ್ಯಾಕ್ಟ್‌ಸ್‌ಗೆ ಹೋಗುವುದಿಲ್ಲ ...

ಅಧ್ಯಕ್ಷರು.—ಏತಕ್ಕೆ ಹಟ ಹಿಡಿಯಬೇಕು. ನೋಟೀಸನ್ನು ಬದಲಾವಣೆ ಏತಕ್ಕೆ ಮಾಡಬಾರದು? ಬೇರೆ ರೀತಿಯಲ್ಲಿ ಕಳುಹಿಸಿ, ಚರ್ಚೆಗೆ ಅವಕಾಶ ಕೊಡುತ್ತೇನೆ ಎಂದು ಹೇಳಿದರು ಈ ರೀತಿ ಏತಕ್ಕೆ ಹಠ ಮಾಡುತ್ತೀರಿ? ಪ್ರಿವಿಲೇಜ್‌ಗೆ ಬರುವುದಿಲ್ಲ ಎಂದು ಹೇಳಿದ್ದೇನೆ.

** As ordered by the Chair, the matter was not recorded.

ಶ್ರೀ ಎಂ. ವಿರಪ್ಪಮೊಯಿಲಿ.—ಸನ್ಮಾನ್ಯ ಸದಸ್ಯರಾದಂಥ ಬಂಗಾರಪ್ಪನವರು ಹಿರಿಯ ಸದಸ್ಯರು. ಇದು ಏನಾಗಿದೆ ತಮಗೆ ಗೊತ್ತಿದೆ ..

(ಗೊಂದಲ)

ಒಬ್ಬ ಮಾನ್ಯ ಸದಸ್ಯರು.—ಅಧ್ಯಕ್ಷರೆ, ಬಂಗಾರಪ್ಪನವರಿಗೆ ಒಂದು ನಿಯಮಾವಳಿ, ಮೊಯಿಲಿಯವರಿಗೆ ಒಂದು ನಿಯಮಾವಳಿ ಇರುತ್ತದೆಯೇ ದಯಮಾಡಿ ತಿಳಿಸಬೇಕು.

ಶ್ರೀ ಎಂ. ವೀರಪ್ಪಮೊಯ್ಲಿ.—ಮಾನ್ಯ ಅಧ್ಯಕ್ಷರೆ, ಹಿರಿಯ ಸದಸ್ಯರಾದ ಮಾನ್ಯ ಬಂಗಾರಪ್ಪನವರು ಒಂದು ವಿಚಾರದಲ್ಲಿ ಬಹಳ ಬಲವಾದ ನಂಬಿಕೆಯನ್ನು ಇಟ್ಟುಕೊಂಡು ತಮಗೆ ಹೇಳುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಇದರ ಬಗ್ಗೆ ಯಾರೂ ಕೂಡ ಅಪಾರ್ಥವನ್ನು ಮಾಡಿಕೊಳ್ಳಬೇಕಾದ ಪ್ರಮೇಯ ವಿಲ್ಲ. ಪ್ರೀತಿಯಿಂದ ಜಗತ್ತನ್ನೇ ಗೆಲ್ಲಬಹುದು. ಇವತ್ತು ಮಾನ್ಯ ಸದಸ್ಯರು ಒಳ್ಳೆಯ ಫಳಿಗೆಯಲ್ಲಿ ತಮ್ಮ ಭಾಷಣವನ್ನು ಪ್ರಾರಂಭಮಾಡಿಲ್ಲ. ಅವರು ಈಗ ಸದನದಲ್ಲಿ ಪ್ರಸ್ತಾಪ ಮಾಡಿರುವ ವಿಷಯವನ್ನು ಬೇರೆ ರೀತಿಯಲ್ಲಿ ಬದಲಾವಣೆ ಮಾಡುವುದರ ಮೂಲಕ ಸಭೆಯ ಮುಂದೆ ತರಬೇಕೆಂದು ಅವರಿಗೆ ತಾವು ಅಪ್ಪಣೆಯನ್ನು ನೀಡಿದ್ದೀರಿ. ಆದರ ಪ್ರಕಾರ ಅವರು ಇದೇ ವಿಷಯವನ್ನು ಬೇರೆ ರೀತಿಯಲ್ಲಿ ತರುತ್ತಾರೆ....

ಅಧ್ಯಕ್ಷರು.—ಮೊದಲಿನಿಂದಲೂ ನಾನು ಅದನ್ನೇ ಹೇಳುತ್ತಿದ್ದೇನೆ. ಆದರೆ ನಾನು ಹೇಳುವುದನ್ನು ಕೇಳುವ ತಾಳ್ಮೆ ಅವರಲ್ಲಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ವಿಷಯದ ಬಗ್ಗೆ ಚರ್ಚೆಗೆ ತಾವು ಅವಕಾಶವನ್ನು ಕೊಟ್ಟಿದ್ದೀರಿ. ಇದರ ಬಗ್ಗೆ ನನ್ನ ಅಭಿಪ್ರಾಯ ಬೇರೆ ಇಲ್ಲ. ನಾನು ಕಳುಹಿಸಿರತಕ್ಕ ಹಕ್ಕುಬಾಧ್ಯತಾ ನಿರ್ಣಯ ಈಗ ಏನಿದೆ ಅದು ಸರಿಯಾಗಿಲ್ಲ, ಅದನ್ನು ಬೇರೆ ರೀತಿಯಲ್ಲಿ ಸದನದ ಮುಂದೆ ತರಬೇಕೆಂದು ತಾವು ಹೇಳಿದ್ದೀರಿ. ಪ್ರಿವಿಲೇಜ್ ಮೋಷನ್....

ಅಧ್ಯಕ್ಷರು.—ಪ್ರಿವಿಲೇಜ್ ಮೋಷನ್ ಎಂದು ನಾನು ಹೇಳಲೇ ಇಲ್ಲ. ಈ ವಿಷಯ ಪ್ರಿವಿಲೇಜ್‌ಗೆ ಬರುವುದಿಲ್ಲ. ಆದ್ದರಿಂದ ಇದನ್ನು ಬೇರೆ ರೀತಿಯಲ್ಲಿ ತಾವು ಕಳುಹಿಸಿದರೆ ಅದಕ್ಕೆ ಅವಕಾಶವನ್ನು ಕೊಡುತ್ತೇನೆಂದು ನಾನು ಹೇಳಿದ್ದೇನೆ. ಪದೇಪದೇ ನಾನು ತಮ್ಮಲ್ಲಿ ಮನವಿ ಮಾಡಿಕೊಂಡಿದ್ದೇನೆ. ಆದರೂ ತಾವು ಹಠ ಹಿಡಿದಿದ್ದೀರಿ....

ಶ್ರೀ ಎಸ್. ಬಂಗಾರಪ್ಪ.—ತಮ್ಮ ಹತ್ತಿರ ನಾನು ಹಠ ಮಾಡುವ ಅಭಿಪ್ರಾಯ ಇರಲಿಲ್ಲ. ತಾವು ರೊಲಿಂಗ್ ಕೊಟ್ಟಮೇಲೆ ಅದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಅದರಂತೆ ನಾನು ಒಪ್ಪಿಕೊಳ್ಳುತ್ತೇನೆ. ಪ್ರತಿಯೊಂದು ರೂಲಿಂಗನ್ನೂ ತಾವು ರಿವೈಸ್ ಮಾಡುವುದಕ್ಕಾಗುವುದಿಲ್ಲ ಎಂಬುದನ್ನೂ ನಾನು ಒಪ್ಪುತ್ತೇನೆ. ತಾವು ಕಾನೂನು ಚೌಕಟ್ಟಿನಲ್ಲಿ ಕೆಲಸಮಾಡಬೇಕಾಗುತ್ತದೆ. ಈ ವಿಚಾರದಲ್ಲಿ ನಾನು ಬೇರೆ ಮಾತನಾಡುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಇಂಥ ನಿದರ್ಶನಗಳು ಈ ಎರಡೂ ಸದನಗಳಲ್ಲಿ ನಡೆಯುತ್ತವೆ. ಆ ದೃಷ್ಟಿಯಿಂದ ಈ ವಿಚಾರದಲ್ಲಿ ನಾನು ಪ್ರಸ್ತಾಪಮಾಡಿ ಇದರಲ್ಲಿ ನಿಮ್ಮನ್ನು ಕನ್‌ವಿನ್ಸ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿರುವಾಗ....

ಅಧ್ಯಕ್ಷರು.—ನಾನು ಕನ್‌ವಿನ್ಸ್ ಆಗಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಮತ್ತೆ ತಾವು ಅದನ್ನೇ ಹೇಳಿದರೆ ನನಗೆ ಕಷ್ಟವಾಗುತ್ತದೆ. ತಾವು ಕನ್‌ವಿನ್ಸ್ ಆಗಿ ರೂಲಿಂಗ್ ಕೊಟ್ಟಿದ್ದೀರಿ. ಅದನ್ನು ನಾನು ಪ್ರಶ್ನೆ ಮಾಡುತ್ತಿಲ್ಲ. ಆದರೆ ಬೇರೆ ಕಾರಣಗಳನ್ನು ಕೊಟ್ಟು ನಾನು ತಮ್ಮನ್ನು ಕನ್‌ವಿನ್ಸ್ ಮಾಡಿದರೆ, ಆಗ ತಮ್ಮ ರೂಲಿಂಗನ್ನು ರಿವೈಸ್ ಮಾಡುವಂಥ ಪರಿಸ್ಥಿತಿ ಬಂದರೆ ನೀವು ಮಾಡುತ್ತೀರಾ ? ಆದ್ದರಿಂದ ನಾನು ಹೇಳುತ್ತಿದ್ದೇನೆ. ಈ ರೀತಿ ತಾವು ತಕ್ಷಣವೇ ತಮ್ಮ ಕನ್ಸೆಂಟ್‌ನ್ನು ಕೊಡುತ್ತೀರೆಂದು ನನಗೆ ಮೊದಲೇ ಗೊತ್ತಾಗಲಿಲ್ಲ. ಹಾಗೆ ಗೊತ್ತಾಗಿದ್ದಿದ್ದರೆ...

ಅಧ್ಯಕ್ಷರು.—ಹಾಗೆ ಹೇಳುವ ಅಧಿಕಾರ ಇದೆ ಎಂಬುದನ್ನಾದರೂ ತಾವು ಒಪ್ಪಿಕೊಳ್ಳುತ್ತೀರಾ ?

ಶ್ರೀ ಎಸ್. ಬಂಗಾರಪ್ಪ.—ರೂಲಿಂಗ್‌ನ್ನು ರಿವೈಸ್ ಮಾಡುವುದಕ್ಕೆ ಅವಕಾಶ ಇದೆ ಎಂದು ನಾನು ಹೇಳಿದಮೇಲೆ ಅವಕಾಶವನ್ನು ಕೊಡಬೇಕಾಗಿತ್ತು. ತಾವು ಹಿಂದೆ ವಿರೋಧ ಪಕ್ಷದ ನಾಯಕರಾಗಿ ಕೆಲಸಮಾಡಿದ್ದೀರಿ, ನಾನು ಸಭಾ ನಾಯಕನಾಗಿ ಕೆಲಸಮಾಡಿದ್ದೇನೆ. ತಮಗೆ ಎಲ್ಲವೂ ಗೊತ್ತಿದೆ. ಈ ಸದನದ ಮಾನ್ಯ ಸದಸ್ಯರ ಹಕ್ಕುಬಾಧ್ಯತಾ ಪ್ರಶ್ನೆ ಕೆಲವು ಸಂದರ್ಭದಲ್ಲಿ ಬಂದಾಗ ಅದನ್ನು ತಮ್ಮ ಗಮನಕ್ಕೆ ತರಬೇಕಾಗುತ್ತದೆ. ಆದರೆ ಈಗ ನಾನು ಅದರ ವಿವರಕ್ಕೆ ಹೋಗುವುದಿಲ್ಲ. ನಾನು ಮಾತನಾಡುವಾಗ ಬೇರೆಯವರು ಪಾಯಿಂಟ್ ಆಫ್ ಆರ್ಡರ್‌ಗಳನ್ನು ಬಹಳವಾಗಿ ಎತ್ತಿದರು. ಅಂದರೆ ಯಾರು ಇಲ್ಲಿ ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಿದರು ಎಂದು ಹೇಳುತ್ತೇನೆ.

ಅಧ್ಯಕ್ಷರು.—ನಿಮ್ಮ ಹಕ್ಕುಬಾಧ್ಯತೆಗೆ ಅವಕಾಶ ಇಲ್ಲವೆಂದು ಹೇಳುವ ಕಾರಣ ಇರುವುದರಿಂದ ಇದನ್ನು ಬೇರೆ ರೂಪದಲ್ಲಿ ತನ್ನಿ ಎಂದು ನಾನು ಎಷ್ಟು ಹೇಳಿದರೂ ಕೂಡ ತಾವು ಪದೇ ಪದೇ ಅದನ್ನೇ ಹೇಳುತ್ತಾ ಹೋಗುತ್ತಿದ್ದೀರಿ ..

ಶ್ರೀ ಎಸ್. ಬಂಗಾರಪ್ಪ.—ತಮ್ಮ ಮನಸ್ಸಿಗೆ ನಾನು ನೋವು ಮಾಡುವುದಿಲ್ಲ. ವಿಷಯಕ್ಕೆ

ತಾವು ನನಗೆ ಅವಕಾಶವನ್ನು ಕೊಟ್ಟಿದ್ದೀರಿ ಅದಕ್ಕೆ ಒಪ್ಪಿಕೊಳ್ಳುತ್ತೇನೆ. ಹಕ್ಕುಬಾಧ್ಯತಾ ನಿರ್ಣಯಕ್ಕೆ ಸಂಬಂಧಪಟ್ಟಂತೆ ನಿಮ್ಮ ಮನಸ್ಸನ್ನು ಒಲಿಸಲು ನಾನು ಪ್ರಾಮಾಣಿಕ ಪ್ರಯತ್ನವನ್ನು ಮಾಡಿದಾಗ ತಾವು ನನಗೆ ಅವಕಾಶವನ್ನು ಕೊಡದೆ ಬೇರೆ ಸದಸ್ಯರು ಮಾತನಾಡಲು ಅವಕಾಶವನ್ನು ಕೊಟ್ಟು ನನ್ನ ಹಕ್ಕನ್ನು ಮೊಟಕು ಮಾಡಿದ್ದರಿಂದ ನಾನು ತಮ್ಮ ಹತ್ತಿರ ಹಠ ಹಿಡಿಯಬೇಕಾಯಿತು. ಅದು ಏನಾದರೂ ಇರಲಿ ತಾವು ನನಗೆ ಅವಕಾಶವನ್ನು ಕೊಟ್ಟರೆ ವಿಚಾರವನ್ನು ಹೇಳುತ್ತೇನೆ. ತಾವು ನನಗೆ ಅವಕಾಶವನ್ನು ಕೊಡದೇ ಹೋದರೆ ನಾನು ಕೂತುಕೊಳ್ಳುವುದಿಲ್ಲ.

ಅಧ್ಯಕ್ಷರು.—ತಾವು ಬೇರೆ ರೂಪದಲ್ಲಿ ಅದನ್ನು ಕಳುಹಿಸಿದರೆ ಅದಕ್ಕೆ ಅವಕಾಶ ಕೊಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಆಗಬಹುದು.

ಮುಖ್ಯಮಂತ್ರಿಯವರ ಹೇಳಿಕೆ

ವಿಷಯ :— ರಾಯಚೂರಿನಲ್ಲಿ ನಡೆದ ಗೋಲಿಬಾರ್ ಬಗ್ಗೆ

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಯವರು) :—

ದಿನಾಂಕ : 18-8-1983ರಂದು ಹಮ್ಮದರ್ಡ್ ಜೂನಿಯರ್ ಕಾಲೇಜಿನ ವಿದ್ಯಾರ್ಥಿ ಸಂಘಕ್ಕೆ ತಾರೀಖು 27-8-1983ರಂದು ನಡೆಯಬೇಕಾಗಿದ್ದ ಚುನಾವಣೆಗೆ ನಾಮಪತ್ರಗಳನ್ನು ಸಲ್ಲಿಸುವ ವಿಷಯದಲ್ಲಿ ವಿದ್ಯಾರ್ಥಿಗಳ ಎರಡು ಗುಂಪುಗಳ ನಡುವೆ ಘರ್ಷಣೆ ಉಂಟಾಯಿತೆಂದು ವರದಿಯಾಗಿದೆ. ಆರ್. ರಾಮಸ್ವಾಮಿ ಮತ್ತು ಆರ್. ಹನುಮಂತು ಎಂಬ ಇಬ್ಬರು ಹರಿಜನ ವಿದ್ಯಾರ್ಥಿಗಳು ಹೊಡೆಯಲ್ಪಟ್ಟರು. ರೆಡ್ಡಿ ಕೋಮಿಗೆ ಸೇರಿದ ವಿದ್ಯಾರ್ಥಿಗಳು ಹರಿಜನ ವಿದ್ಯಾರ್ಥಿಗಳನ್ನು ಹೆದರಿಸಿ ಅವರನ್ನು ಚುನಾವಣೆಗೆ ಸ್ಪರ್ಧಿಸಬಾರದೆಂದು ಕೇಳಿಕೊಂಡರೆಂದು ಆಪಾದಿಸಲಾಗಿದೆ. ಆರ್. ಸ್ವಾಮಿಯವರು ಕೊಟ್ಟ ದೂರಿನ ಮೇರೆಗೆ ಗೋಪಾಲರೆಡ್ಡಿ ಮತ್ತು ಇತರ ಐದು ವಿದ್ಯಾರ್ಥಿಗಳ ವಿರುದ್ಧ ಸಾದರ್ ಬಜಾರ್ ಪೋಲೀಸ್ ಠಾಣೆ ಗುನ್ನೆ ಸಂಖ್ಯೆ 266 : 83ರ ಭಾರತ ದಂಡ ಸಂಹಿತೆಯ ಕಲಂ 143, 147, ಮತ್ತು 327ರ ಪ್ರಕಾರ ಒಂದು ಮೊಕದ್ದಮೆಯನ್ನು ದಾಖಲ್ಮಾಡಲಾಯಿತು.

2. ತಾರೀಖು 19-8-1983ರಂದು ಹರಿಜನ ವಿದ್ಯಾರ್ಥಿಗಳು ರೆಡ್ಡಿ ಕೋಮಿನ ವಿದ್ಯಾರ್ಥಿಗಳನ್ನು ಕಾಲೇಜು ಆವರಣದಲ್ಲಿ ಮುತ್ತಿಗೆ ಹಾಕಿದರೆಂದು ಹೇಳಲಾಗಿದೆ. ಕಾಲೇಜಿನ ಪ್ರಿನ್ಸಿಪಾಲರು ಮತ್ತು ಸ್ಥಳೀಯ ಪೋಲೀಸರು ವಿದ್ಯಾರ್ಥಿಗಳನ್ನು ಸಮಜಾಯಿಸಿ ಮಾಡಿದರು. ಸಾಯಂಕಾಲ 5 ಗಂಟೆ ಹೊತ್ತಿಗೆ ಹಮ್ಮದರ್ಡ್ ಕಾಲೇಜಿನ ಸುಮಾರು 100 ಹರಿಜನೇತರ ವಿದ್ಯಾರ್ಥಿಗಳು ಹರಿಜನ ವಾಡಿಗೆ ಚುನಾವಣಾ ಪ್ರಚಾರಕ್ಕೆ ಹೋದರು. ಹರಿಜನ ವಿದ್ಯಾರ್ಥಿಗಳು ಮತ್ತು ಇತರೇ ಕೋಮುಗಳ ವಿದ್ಯಾರ್ಥಿಗಳ ನಡುವೆ ಜಗಳವಾಯಿತು. ಸ್ಥಳೀಯ ಪೋಲೀಸರು ಮಧ್ಯ ಪ್ರವೇಶಿಸಿದರು. ಆರ್ ಹನುಮಂತು ಎಂಬ ಹರಿಜನ ವಿದ್ಯಾರ್ಥಿಯು ಕೊಟ್ಟ ದೂರಿನ ಮೇರೆಗೆ ಸೋಮವಾರಪೇಟೆಯ ಪೋಲೀಸ್ ಠಾಣೆ ಗುನ್ನೆ ಸಂಖ್ಯೆ 212 : 83ರಲ್ಲಿ ಭಾರತ ದಂಡ ಸಂಹಿತೆ ಕಲಂ 147, ಮತ್ತು 323ರ ಪ್ರಕಾರ ಶ್ರೀನಿವಾಸ್ ಮತ್ತು ಇತರರ ವಿರುದ್ಧ ಮೊಕದ್ದಮೆ ದಾಖಲ್ಮಾಡಲಾಯಿತು. ನರಸಿಂಹಯ್ಯ ರೆಡ್ಡಿ ಮತ್ತು ಇತರ ನಾಲ್ವರು ಪೋಲೀಸರಿಂದ ಬಂಧಿಸಲ್ಪಟ್ಟರು. ಇದಕ್ಕೆ ಪ್ರತಿಯಾಗಿ ಸೋಮವಾರ ಪೇಟೆ ಪೋಲೀಸ್ ಠಾಣೆ ಗುನ್ನೆ ಸಂಖ್ಯೆ 213 83ರಲ್ಲಿ ಭಾರತದ ಸಂಹಿತೆ ಕಲಂ 147 ಮತ್ತು 323ರ ಮೇರೆಗೆ ಕೇಸು ದಾಖಲ್ಮಾಡಲಾಯಿತು. ಈ ಘರ್ಷಣೆಗಳಲ್ಲಿ ಶ್ರೀ ಜನಾರ್ಧನರೆಡ್ಡಿ ಮತ್ತು ಇತರ ನಾಲ್ಕು ಹರಿಜನೇತರ ವಿದ್ಯಾರ್ಥಿಗಳಿಗೆ ಸಣ್ಣಪುಟ್ಟ ಗಾಯಗಳಾಗಿದ್ದವೆಂದು ವರದಿಯಾಗಿದೆ. ಎರಡು ಕೋಮಿನ ಮುಖಂಡರುಗಳು ವಿದ್ಯಾರ್ಥಿಗಳಿಗೆ ಹಿತವಚನಗಳನ್ನು ಹೇಳಿ ಸಮಾಧಾನಪಡಿಸಲು ಒಪ್ಪಿಕೊಂಡಿದ್ದರು. 19-8-1983 ರಂದು ರಾತ್ರಿ 10–30ರ ಸಮಯದಲ್ಲಿ ರಿಕ್ಷಾ ಚಾಲಕ ಕೆಂಚಪ್ಪ, ಹರಿಜನ್ ಎಂಬುವರನ್ನು ಮುನರ್ವಾಡಿ ಪ್ರದೇಶಕ್ಕೆ ಸೇರಿದವನೆಂದು ಶಂಕಿಸಲಾದ ಕೆಲವು ಅಪರಿಚಿತ ಜನರಿಂದ ಹಲ್ಲೆಗೊಳಗಾದರೆಂದು ಹೇಳಲಾಗಿದೆ. ಆತನು ಕೊಟ್ಟ ದೂರಿನ ಮೇರೆಗೆ 20-8-83ರಂದು ಸೋಮವಾರಪೇಟೆ ಪೋಲೀಸ್ ಠಾಣೆಯ ಗುನ್ನೆ ಸಂಖ್ಯೆ 216 : 83ರಲ್ಲಿ ಭಾರತ ದಂಡ ಸಂಹಿತೆ ಕಲಂ 147 ಮತ್ತು 323ರ ಪ್ರಕಾರ ಕೇಸು ದಾಖಲ್ಮಾಡಲಾಯಿತು. ಶ್ರೀ ಕೆಂಚಪ್ಪ ಹರಿಜನ್‌ರವರನ್ನು ರಾಯಚೂರು ಸಿವಿಲ್ ಆಸ್ಪತ್ರೆಯಲ್ಲಿ ಹೋರ ರೋಗಿಯನ್ನಾಗಿ ನೀಡಲಾಯಿತು.

3. 20-8-83ರಲ್ಲಿ ಬೆಳಿಗ್ಗೆ ಮುನರ್‌ವಾಡಿ ಪ್ರದೇಶಕ್ಕೆ ಸೇರಿದಂತೆ ಹರಿಜನ ಮತ್ತು ಇತರೆ ಕೋಮಿನ ಮುಖಂಡರನ್ನೊಳಗೊಂಡ ಒಂದು ಶಾಂತಿ ಸಮಿತಿಯ ಸಭೆಯನ್ನು ಕರೆಯಲಾಗಿತ್ತು ಮತ್ತು ಈ ಸಭೆಯಲ್ಲಿ ಆ ಮುಖಂಡರುಗಳು ಆಯಾ ಗುಂಪಿಗೆ ಸೇರಿದ ಜನರನ್ನು ಸಮಾಧಾನಪಡಿಸಿ ರಾಜಿ ಮಾಡಿಸಲು ಒಪ್ಪಿಕೊಂಡರು. ಈ ಮುಖಂಡರುಗಳು ಹರಿಜನ ವಾಡಿಗೆ ರಾಜಿ ಮಾಡುವ ಸಲುವಾಗಿ ಹೋದಾಗ ಒಬ್ಬ ಹರಿಜನ ಕೂಲಿಯವನು ಈ ಸ್ಥಳಕ್ಕೆ ಬಂದು ಮುನರ್‌ವಾಡಿಗೆ ಸೇರಿದ ಕೆಲವರು ಬಂದು ತನ್ನ ಹಾಗು ಇತರರ ಮೇಲೆ ಹಲ್ಲೆ ಮಾಡಲು ಪ್ರಯತ್ನಿಸಿದರು ಎಂಬುದಾಗಿ ಹೇಳಿದನೆಂದು ತಿಳಿದು ಬಂದಿದೆ. ಈ ಸಂಬಂಧದಲ್ಲಿ ಸ್ಥಳೀಯ ಹರಿಜನರು ಉದ್ರಿಕ್ತಗೊಂಡರು ಮತ್ತು ಶಾಂತಿಪಾಲನೆ ಸಮಿತಿಯ ನಿರ್ಧಾರದ ಮೇರೆಗೆ ರಾಜಿ ಮಾಡುವ ಉದ್ದೇಶದಿಂದ ಹೋದ ಮುನರ್‌ವಾಡಿ ಪ್ರದೇಶದ ಮುಖಂಡರುಗಳ ಮೇಲೆ ಹಲ್ಲೆ ಮಾಡಿದರೆಂದು ಹೇಳಲಾಗಿದೆ. ಮುನರ್‌ವಾಡಿ ಪ್ರದೇಶದ ಮುಖಂಡರುಗಳು ಹುದುಗಿ